ಹಾಗೂ ಮುಂದುವರೆದ ಶಿಕ್ಷಣ ಕಾರ್ಯಕ್ರಮವನ್ನು ನಡೆಸಲಾಗುವುದು. ಸಾಕ್ಷರತಾ ಆಂದೋಲನಾ ಮುಗಿಸಿರುವ ಜಿಲ್ಲೆಗಳಲ್ಲಿ ಸಾಕ್ಷರೋತ್ತರ ಹಾಗೂ ಮುಂದುವರೆದ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅರಣ್ಯ ಅಭಿವೃದ್ಧಿ ನಿಗಮದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ

736 - ಶ್ರೀ ಎಸ್. ಅಂಗಾರ (ಸುಳ್ಯಾ) : ಮಾನ್ಯ ಅರಣ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಲ್ಲಿ ಎಷ್ಟು ಜನ ಕಾರ್ಮಿಕರನ್ನು ತಾತ್ಕಾಲಿಕ ಗುತ್ತಿಗೆದಾರರ ಆಧಾರದಲ್ಲಿ ನಿಯಮಿಸಿ ದುಡಿಯುತ್ತಿದ್ದಾರೆ: ಈ ಕಾರ್ಮಿಕರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು?*

ಆ) *ಕೈಗಾರಿಕಾ ವಿವಾದಗಳ ಅಧಿನಿಯಮ 1947ರ ಪ್ರಕಾರಣ 'ಯು ' ರ ಪ್ರಕಾರ ಉಲ್ಲಂಘಿಸಿ, ದುಡಿಸುತ್ತಿದ್ದ ಆ ನಿತಿಯ ಧೋರಣೆಯನ್ನು ಹೊಂದಿರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಯಮದ ನಿಯೋಜಕರ ವಿರುದ್ಧ ಸರಕಾರ ಯಾವ ಕ್ರಮ ಕೈಗೊಂಡಿದೆ?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಈ ನಿಗಮದಲ್ಲಿ ಯಾವುದೆ ಕಾರ್ಮಿಕರನ್ನು ತಾತ್ಕಾಲಿಕ ಗುತ್ತಿಗೆದಾರರ ಆಧಾರದ ಮೇಲೆ ನಿಯಮಿಸಿಕೊಂಡಿಲ್ಲ.

ಆ) ಪ್ರಶ್ನೆ 'ಅ'ಗೆ ನೀಡಿರುವ ಉತ್ತರದನ್ವಯ ಕರ್ನಾಟಕ ಅರಣ್ಯ ವಿವಾದಗಳ ಅಧಿನಿಯಮ 1947 ಪ್ರಕರಣ 'ಯು' ರ ಉಲ್ಲಂಘನೆಯನ್ನು ಮಾಡಿರುವುದಿಲ್ಲ.

ಸುಳ್ಯಾ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಕ್ಷ-ಕಿರಣ ಘಟಕ ಕುರಿತು

742 - ಶ್ರೀ ಎಸ್. ಅಂಗಾರ (ಸುಳ್ಯಾ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುಳ್ಯಾ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಕ್ಸ್-ರೇ ಯೂನಿಟ್ ಪ್ರಾರಂಭಿಸಲಾಗಿದೆಯೇ, ಹಾಗಿದ್ದಲ್ಲಿ ಯಾವ ಆಸ್ಪತ್ರೆಯಲ್ಲಿ,*

ಆ) *ಅದು ಕಾರ್ಯ ನಿರ್ವಹಿಸುತ್ತಿದೆಯೇ, ಹಾಗೂ ಅದಕ್ಕೆ ಎಕ್ಸ್-ರೇ ತಾಂತ್ರಿಕರು ಇದ್ದಾರೆಯೇ?*

ಇ) *ಸುಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಂಬುಲೆನ್ಸ್ (ಸಂಚಾರಿ ವಾಹನ) ಮಂಜೂರಾಗಿದೆಯೇ? ಮಂಜೂರಾಗಿದ್ದರೆ ಸೂಳ್ಯ ಕೇಂದ್ರಕ್ಕೆ ಒದಗಿಸಲಾಗಿದೆಯೇ? ಒದಗಿಸಲಾಗಿದ್ದರೆ ಯಾವ ವರ್ಷದಲ್ಲಿ.*

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸತಿವರು):

ಅ) ಸುಳ್ಯಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಕ್ಷ-ಕಿರಣ ಘಟಕವು ಮಂಜೂರಾಗಿದೆ.

ಆ) ಕ್ಷ-ಕಿರಣ ಯಂತ್ರವು ಪೂರೈಕೆಯಾಗದ ಕಾರಣದಿಂದಲೂ ಹಾಗೂ ಕ್ಷ-ಕಿರಣ ತಂತ್ರಜ್ಞರ ಹುದ್ದೆ ಖಾಲಿ ಇರುವುದರಿಂದ ಅದು ಕಾರ್ಯ ನಿರ್ವಹಿಸುತ್ತಿಲ್ಲ. ಕ್ಷ-ಕಿರಣ ಯಂತ್ರವನ್ನು ಸರಬರಾಜು ಮಾಡಲು ಹಾಗೂ ಖಾಲಿ ಇರುವ ಕ್ಷ-ಕಿರಣ ತಂತ್ರಜ್ಞರ ಹುದ್ದೆಯನ್ನು ಸರ್ಕಾರದ ಮೀಸಲಾತಿ ಆದೇಶ ಹೊರಡಿಸಿದ ನಂತರ ತುಂಬಲು ನಂತರ ಕ್ಷ-ಕಿರಣ ಘಟಕವನ್ನು ಪ್ರಾರಂಭ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) 1) ಸುಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಂಬುಲೆನ್ಸ್ (ಸಂಚಾರಿ ವಾಹನ) ಮಂಜೂರಾಗಿರುವುದಿಲ್ಲ.

(ii) ಉದ್ಭವಿಸುವುದಿಲ್ಲ.

(iii) ಉದ್ಭವಿಸುವುದಿಲ್ಲ

ಸರ್ಕಾರಿ ಕಾಲೇಜು ಕಟ್ಟಡದ ಬಗ್ಗೆ

743 - ಶ್ರೀ ಎಸ್. ಅಂಗಾರ (ಸುಳ್ಯಾ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1993-94ನೇ ಸಾಲಿನಲ್ಲಿ ಸುಳ್ಯಾ ತಾಲ್ಲೂಕಿನ ಸರಕಾರಿ ಪ್ರಥಮ ದರ್ಜೆ ಕಾಲೇಜು ಬೆಳ್ಳಾರಿಯ ಕಾಲೇಜು ಕಟ್ಟಡಕ್ಕೆ ಎಷ್ಟು ಮೊತ್ತವನ್ನು ಮಂಜೂರು ಮಾಡಲಾಗಿದೆ?

ಆ) ಕಟ್ಟಡವನ್ನು ಎಷ್ಟು ವರ್ಷಗಳಲ್ಲಿ ಪೂರ್ತಿಗೊಳಿಸಲಾಗುವುದು?

ಇ) ಈ ಕಟ್ಟಡ ಪೂರ್ತಿಗೊಂಡಾಗ ಎಷ್ಟು ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವುದು?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) 1993-94ನೇ ಸಾಲಿನಲ್ಲಿ ಸುಳ್ಯಾ ತಾಲ್ಲೂಕಿನ ಬೆಳ್ಳಾರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಒಟ್ಟು ರೂ. 6.60 ಲಕ್ಷಗಳ ಅಂದಾಜು ಮೊತ್ತಕ್ಕೆ ರೂ. 2.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ರೂ.2.00 ಲಕ್ಷಗಳನ್ನು ಸಂಪೂರ್ಣವಾಗಿ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಜಾಗ್ರತೆಯಾಗಿ ಕಟ್ಟಡವನ್ನು ಪೂರ್ತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಕಟ್ಟಡದ ಪೂರ್ಣಗೊಂಡಿರದ ಸದರಿ ಕಾಲೇಜಿನಲ್ಲಿ ಈಗ ವಿದ್ಯಾಭ್ಯಾಸ ಮಾಡುತ್ತಿರುವ ಸುಮಾರು 310 ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವುದು.

ಪ್ರಕಟಣೆ

ಅಧ್ಯಕ್ಷರು : ಪಟ್ಟಿಯನ್ನು ಮಂಡಿಸಲಾಯಿತು. ಈಗ ಒಂದು ಪ್ರಕಟಣೆ ಇದೆ. ಅದನ್ನು ಓದಿ ಬರುತ್ತೇನೆ. ದಿನಾಂಕ 4-4-95ರಂದು ಸಂಜೆ 6.10 ಸಮಯದಲ್ಲಿ ವಿಧಾನ ಸಭೆಯಲ್ಲಿ ಸಾರ್ವಜನಿಕ ಪ್ರೇಕ್ಷಕರ ಗ್ಯಾಲರಿಯಲ್ಲಿ ಶ್ರೀ ಆಲಿಬಾಬಾ, ಶ್ರೀ ಕೆ.ಹೆಚ್.ಗೌರ, ಶ್ರೀಮತಿ ಮಂಜುಳಾ ಮೋಹನ್, ಶ್ರೀಮತಿ ಗಾಯತ್ರಿ ಹಾಗೂ ಶ್ರೀಮತಿ ಗಂಗಮ್ಮ ಇವರುಗಳು ಸಭೆ ನಡೆಯುತ್ತಿರುವ ಸಮಯದಲ್ಲಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಘೋಷಣೆಗಳನ್ನು ಕೂಗುತ್ತಾ ಕರ ಪತ್ರಗಳನ್ನು ಸಭೆಯೊಳಕ್ಕೆ ಎಸೆದು ಸಭೆಯ ಕಾರಯ ಕಲಾಪಗಳಿಗೆ ಅಡಚಣೆಯನ್ನು ಉಂಟುಮಾಡಿರುತ್ತಾರೆ. ವಿಧಾನ ಸಭೆಯ ದಂಡನಾಯಕರು ಅವರನ್ನು ತಕ್ಷಣ ದಸ್ತಗಿರಿ ಮಾಡಿ ವಿಧಾನಸೌದದ ಮೇಲಿನ ಠಾಣೆಯ ಸುಪರ್ದಿಗೆ ವಹಿಸಿಕೊಟ್ಟಿದ್ದು ನಂತರ ಅವರಿಗೆ ಎಚ್ಚರಿಕೆ ಕೊಟ್ಟು ಬಿಡುಗಡೆ ಮಾಡಲು ಆದೇಸಿಸಿದೆ. ಆಮೇಲೆ ದಂಡನಾಯಕರು ಅವರಿಗೆ ಎಚ್ಚರಿಕೆ ನಿಡುವ ಮೂಲಕ ಬಿಡುಗಡೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ) : ಮಾನ್ಯ ಅಧ್ಯಕ್ಷರೆ, ಇವತ್ತು ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಂದು ತಮ್ಮ ಕೊಠಡಿಗೆ ಬಂದು ಮಾತನಾಡಿದ್ದೇನೆ. ಮೊದಲನೆಯ ಆಶ್ಚರ್ಯಕರವಾದ ಘಟನೆ ಎಂದರೆ, ಹೆಬ್ಬಾರು ಸಿಕ್ಕಿರತಕ್ಕದ್ದು. ಇವತ್ತು ಒಂದು ಹೆಬ್ಬಾವು ಸಿಕ್ಕಿದೆ ಎಂದು ಹೇಳಿದ್ದಾರೆ. ಇನ್ನೊಂದು